ಅವರ ಹಿಡಿತ ಅಷ್ಟೊಂದು ಬಿಗಿ ಇರಲಿಲ್ಲ. ಇನ್ನು ಅದರ ಅಪ್ಪನಂತೂ ಮನೆಯನ್ನು ಲಾಡ್ಜಿನ ಹಾಗೆ ಉಪಯೋಗಿಸುತ್ತಿದ್ದುದ್ದರಿಂದ ಅವನಿಂದ ಏನನ್ನೂ ನಿರೀಕ್ಷಿಸುವ ಸ್ಥಿತಿಯೇ ಇರಲಿಲ್ಲ. ಹೀಗಾಗಿಯೆ ಮಗು ಅಮ್ಮನಿಲ್ಲದ ಸಮಯದಲ್ಲಿ ಆಚೀಚೆ ಮನೆಗಳಿಗೆ ಹೋಗಿ ಕೂತುಬಿಡುತ್ತಿತ್ತು. ಅಕ್ಕಪಕ್ಕದವರು ಒಳ್ಳೆಯವರೇ ಆದರೂ ಯಾರನ್ನು ಏನೆಂದು ನಂಬುವುದು ಎನ್ನುವ ಅನುಮಾನ ಶಾರದೆಯನ್ನು ಪ್ರತಿನಿತ್ಯ ಹಿಂಸಿಸುತ್ತಲೇ ಇತ್ತು. ದಿನಕ್ಕೊಮ್ಮೆಯಾದರೂ ಟೀವಿಯಲ್ಲಿ ಬರುವ ಸುದ್ದಿಗಳು ಶಾರದೆಗೆ ಮನುಷ್ಯರ ಕುರಿತಾಗಿನ ನಂಬಿಕೆಯನ್ನೇ ಹಾಳು ಮಾಡಿದ್ದವು. ಎಷ್ಟೋ ಬಾರಿ ಈ ಹಾಳು ಕೆಲಸವೇ ಬೇಡ ಎಂದು ನಿರ್ಧರಿಸಿದರೂ ಜೀವನ ಭದ್ರತೆಯೇ ಇಲ್ಲದ ಗಂಡನ ಸಕ್ಕರೆ ಕಾರ್ಖಾನೆಯ ಕೆಲಸ ಅವಳನ್ನು ಕೆಲಸ ಬಿಡದಂತೆ ಕಟ್ಟಿ ಹಾಕುತ್ತಿತ್ತು. ಇನ್ನು ಯಾರನ್ನಾದರೂ ಹೆಂಗಸರನ್ನು ಕೆಲಸಕ್ಕೆ ಇಟ್ಟುಕೊಳ್ಳೋಣ ಎಂದರೆ ಅವರು ಕೇಳುವ ಸಾವಿರಾರು ರೂಪಾಯಿ ಸಂಬಳ, ಹಬ್ಬದ ಮುಂಗಡ, ವರ್ಷಕ್ಕೆರಡು ಸೀರೆ, ಕೆಳ ಮಧ್ಯಮ ವರ್ಗದ ಸರಿ ಸುಮಾರು ಹರಕುಗಳನ್ನು ಹೆಗಲಿನಲ್ಲಿ ಇಟ್ಟುಕೊಂಡೇ ಬದುಕುತ್ತಿದ್ದವಳಿಗೆ ಪೂರೈಸುವುದು ಸಾಧ್ಯವಿರಲಿಲ್ಲ. ಹೀಗಾಗಿಯೇ ಯಾರಾದರೂ ತಮ್ಮವರೇ ಕಡಿಮೆ ಖರ್ಚಿಗೆ ಸಿಕ್ಕಲಿ ಎಂದು ಹುಡುಕುತ್ತಿದ್ದವಳಿಗೆ ಈ ಭಾಗೀಚಿಕ್ಕಿಯ ನೆನಪಾಗಿ ಅವಳನ್ನು ಕರೆತರುವ ಪ್ರಯತ್ನ ಮಾಡಿದ್ದಳು.

ಅವಳ ನಿರ್ಧಾರ ಕಳಪೆಯದ್ದೇನು ಆಗಿರಲಿಲ್ಲ. ಬಂದ ದಿನದಿಂದ ಭಾಗೀಚಿಕ್ಕಿ ಒಂದು ಕ್ಷಣವೂ ಕೂರದೇ ಮನೆಯ ಅಷ್ಟೂ ಉಸ್ತುವಾರಿಯನ್ನು ಹೊತ್ತಿದ್ದಳು. ಮನೆಯ ಕಸ ಮುಸುರೆಯಿಂದ ಹಿಡಿದು ಶಾರದೆಯ ಮಾವನ ಆರೋಗ್ಯದವರೆಗೆ ಸ್ವಲ್ಪ ದಿನ ಯಾವ ತಂಟೆ ತಕರಾರುಗಳೂ ಇರಲಿಲ್ಲ. ಶಾರದೆ ನಿರುದ್ವಿಗ್ನವಾಗಿ ಕೆಲಸಕ್ಕೆ ಹೋಗಿ ಬಂದು ಮಾಡತೊಡಗಿದಳು. ಆದರೆ ಸ್ವಲ್ಪ ದಿನದ ನಂತರ ಮಗಳ ಹತ್ತು ವರ್ಷದ ಮಗಳ ಕಡೆಯಿಂದ 'ಅಮ್ಮ ಈ ಅಜ್ಜಿ ಸ್ಕೂಲಿಂದ ಬಂದ ತಕ್ಷಣ ನನ್ನ ಬ್ಯಾಗು ಚೆಕ್ ಮಾಡತ್ತೆ' ಎನ್ನುವ ಸಣ್ಣ ದೂರುಗಳು ಬರತೊಡಗಿದವು. ಶಾರದೆ ಮಗಳನ್ನು ಸಮಾಧಾನಿಸುವ ಪ್ರಯತ್ನ ಮಾಡಿದಳು. ಆದರೆ ಆ ದೂರು ಆರಂಭವಷ್ಟೇ ಆಗಿತ್ತು. 'ಅಮ್ಮ ನನ್ನ ಫ್ರೆಂಡ್ಸಿಗೆ ಮನೆ ಹತ್ರ ಬರಬೇಡಿ ಅನ್ನತ್ತೆ ಈ ಅಜ್ಜಿ', 'ಅಮ್ಮ ನಾನು ಎಲ್ಲೂ ಹೊರಗೆ ಆಟಕ್ಕೆ ಹೋಗುದು ಬೇಡ ಅನ್ನತ್ತೆ', 'ನಾನು ಯಾರ ಹತ್ರನೂ ಮಾತಾಡಬಾರದಂತೆ', 'ಅಮ್ಮಾ ನಾನು ಮನೆಲಿ ಸ್ಕರ್ಟ್ ಹಾಕ್ಕೋಬಾರದಂತೆ' ಹೀಗೆ ಶಾರದೆ ದಣಿದು ಮನೆಗೆ ಬರುವ ಹೊತ್ತಿಗೆ ಏನಾದರೊಂದು ದೂರು ತಯಾರಾಗಿರುತ್ತಿತ್ತು. ಶಾರದೆ ಏನೊಂದು ಹೇಳದೆ ಮಗುವಿನ ಮಾತಿಗೆ ಲಕ್ಷ್ಯ ನೀಡದೆ ಸುಮ್ಮನಿದ್ದಳು. ಆದರೆ ಮಗಳು ತನ್ನ ಮೇಲೆಯೇ ಮುನಿಸಿಕೊಂಡು ಮಾತು ಬಿಡಲು ಶುರು ಮಾಡಿದಾಗ ಭಾಗೀಚಿಕ್ಕಿಯನ್ನು ಕೇಳದೆ ಬೇರೆ ಮಾರ್ಗಗಳಿರಲಿಲ್ಲ. ಶಾರದೆ ಕೇಳಿದ ಮೇಲೆಯೂ ಮಗುವಿಗೆ ಏನೂ ಹೇಳಬೇಡಿ ಎಂದು ಹೇಳಿದ ಮೇಲೆಯೂ ಭಾಗೀಚಿಕ್ಕಿಯಲ್ಲಿ ಏನೊಂದು ಬದಲಾವಣೆ ಕಾಣಲಿಲ್ಲ. ಬದಲಾಗಿ, 'ಅಲ್ಲ ಬೆಳೆಯೋ ಮಗೂಗೆ ಹೇಗಿರಬೇಕು ಅಂತ ಏನು ತಿಳಿಯತ್ತೆ, ನಾವು ದೊಡ್ಡೋರು ಕಲಿಸಬೇಕು. ಪ್ರಪಂಚ ಭಾರೀ ಕೆಟ್ಟದ್ದು, ಹೆಣ್ಣು ಮಕ್ಕಳ ವಿಷಯದಲ್ಲಿ' ಎಂದು ಇಷ್ಟು ಉದ್ದದ್ದ ಭಾಷಣ ಕೊಡಲು ಶುರು ಮಾಡಿದ್ದಳು. 'ಕಾಲ ಬದಲಾಗಿದೆ ಚಿಕ್ಕಿ' ಎಂದರೂ ಕೇಳದೆ. 'ಕಾಮ ಬದಲಾಗಿಲ್ಲವಲ್ಲ' ಎಂದು ಹೇಳಿ ಬಾಯಿ ಮುಚ್ಚಿಸಿದ್ದಳು. ಶಾರದೆಗೂ ಆಕೆ ಹೇಳಿದ್ದರಲ್ಲಿ ಏನೂ ತಪ್ಪಿಲ್ಲ ಎಂದು ಅನ್ನಿಸುತ್ತಿತ್ತು. ಅಮ್ಮನಾಗಿ ತಾನು ಮಾಡಬೇಕಾದ ಕೆಲಸವನ್ನು ಆಕೆ ಮಾಡುತ್ತಿದ್ದಾಳೆ ಎನ್ನಿಸಿ ಮಗುವಿಗೆ ಮೆಲ್ಲನೆ ಬುದ್ಧಿ ಹೇಳಿ ಅದರ ಮನಸ್ಸನ್ನು ಬದಲಾಯಿಸುವ ಪ್ರಯತ್ನ